

ಹೆಚ್ಚಿನ ನಿರೀಕ್ಷೆಗಳಿಲ್ಲದ ಮೆಂಟವಯ್‌ಗಳ ನೆಮ್ಮದಿಯ ಬದುಕು



ಬಲು ಅಪರೂಪ್ ನಮ್ ಜೋಡಿ

ಇಂಡೋನೇಷ್ಯಾದ ಪಶ್ಚಿಮ ಸುಮಾತ್ರಾ ಪ್ರಾಂತ್ಯದಿಂದ ಸುಮಾರು 100 ಮೈಲಿ ದೂರದಲ್ಲಿರುವ ಸಿಬರುತ್‌ನಲ್ಲಿರುವ 'ಮೆಂಟವಯ್' ದ್ವೀಪಗಳಲ್ಲಿ ಅದೇ ಹೆಸರಿನಿಂದ ಗುರ್ತಿಸಲಾಗುವ ಸ್ಥಳೀಯ ಜನರಿದ್ದಾರೆ. ಕರಾವಳಿ ಮತ್ತು ಮಳೆಕಾಡು ಪರಿಸರದ ದ್ವೀಪಗಳಲ್ಲಿ ವಾಸಿಸುವ ಅವರದು, ಅಲೆಮಾರಿ ಹಾಗೂ ಬೇಟೆಗಾರ ಜೀವನಶೈಲಿ.

ನಾವು ಪಡಾಂಗ್‌ನಿಂದ ದೊಡ್ಡ ದೋಣಿಯ ಮೂಲಕ ಸುಮಾರು 6 ಗಂಟೆಗಳ ಸಮುದ್ರಯಾನ ಮಾಡಿದ ನಂತರ ಸಿಬರುತ್ ತಲುಪಿದೆವು. ಅಲ್ಲಿಂದ ಮೆಂಟವಯ್ ದ್ವೀಪಗಳಿಗೆ ಪುಟ್ಟ ದೋಣಿಯಲ್ಲಿ ಹೋಗಬೇಕು. ಮೆಂಟವಯ್ ದ್ವೀಪವಾಸಿಗಳ ಹೊಸ ತಲೆಮಾರಿನವರು ಈಗ ನಮ್ಮಂತಹ ಪ್ರವಾಸಿಗರಿಗೆ ಮಾರ್ಗದರ್ಶಕರು. ನಮ್ಮನ್ನು ಅವರು ಮೋಟರ್ ಹೊಂದಿಸಿರುವ ಪುಟ್ಟ ದೋಣಿಯಲ್ಲಿ ಕರೆದೊಯ್ಯುತ್ತಿದ್ದರೆ, ಹರಿಯುವ ನೀರಿನ ಎರಡೂ ಬದಿಯ ಹಸಿರು ಪರಿಸರ, ಕಾಡು, ಹಕ್ಕಿಗಳ ಗಾನ ಕೇಳುತ್ತಾ, ಎಲ್ಲಿಗೆ ಹೋಗುತ್ತಿದ್ದೇವೆ, ಯಾವ ದಿಕ್ಕಿಗೆ ಹೋಗುತ್ತಿದ್ದೇವೆ ಎಂದು ತಿಳಿಯದೆ ಕಣ್ಣುಕಟ್ಟಿ ಕರೆದೊಯ್ದಂತೆ ಭಾಸವಾಗುತ್ತಿತ್ತು.

ದ್ವೀಪವೊಂದರ ತುದಿಗೆ ಹೋಗಿ ದೋಣಿ ನಿಲ್ಲಿಸಿದರು. ಅಲ್ಲಿ ಕೆಸರುಮಯ ನೆಲ. ಶೂ–ಚಪ್ಪಲಿ ಕಳಚಿ, ಪ್ಯಾಂಟ್ ಮಡಿಚಿ ಇಳಿಯಬೇಕಾಗಿತ್ತು. ನಮ್ಮನ್ನು ಸ್ವಾಗತಿಸಲು ಮೆಂಟವಯ್ ಜನರು ದಂಡೆಗೆ ಆಗಮಿಸಿದ್ದರು. ಆ ನೆಲದಲ್ಲಿ ನಮಗೆ ನಡೆಯುವುದೇ ಕಷ್ಟಕರ. ಮರದ ದಿಮ್ಮಿಗಳನ್ನು ಕಾಡುದಾರಿಯಲ್ಲಿ ಹಾಕಿದ್ದರು. ಅದರ ಮೇಲೆ ಸ್ಥಳೀಯರು ನಮ್ಮ ಬ್ಯಾಗುಗಳನ್ನೂ ಇತರ ವಸ್ತುಗಳನ್ನೂ ಹೊತ್ತು ಲೀಲಾಜಾಲವಾಗಿ ನಡೆದರು. ನಾವು ಅತ್ತ ಕೆಸರಿನಲ್ಲೂ ನಡೆಯಲಾಗದೆ, ಇತ್ತಮರದ ತುಂಡುಗಳ ಮೇಲೂ ಸಮತೋಲನ ಕಾಪಾಡಿಕೊಳ್ಳಲಾಗದೇ ಬಿದ್ದೂ ಎದ್ದೂ ನಡೆದೆವು. ಕ್ಯಾಮೆರಾ ಬ್ಯಾಗುಗಳನ್ನು ಹುಷಾರಾಗಿ ಹೊತ್ತು ಸಾಗುವುದೇ ನಮಗೆ ದೊಡ್ಡ ಸಾಹಸವಾಗಿತ್ತು.

ಮೆಂಟವಯ್ ಜನರು ಮೈತುಂಬ ಹಚ್ಚೆ ಹಾಕಿಕೊಂಡು ಕೌಪೀನ ಧರಿಸಿದ್ದರು. ಬಿದಿರು, ಮರ ಮತ್ತು ಹುಲ್ಲಿನಿಂದ ನಿರ್ಮಿಸಲಾದ ಅವರ ಗುಡಿಸಲನ್ನು 'ಉಮಾ' ಎನ್ನುವರು. ಅಲ್ಲಿಗೆ ನಮ್ಮ ವಸ್ತುಗಳನ್ನು ಸಾಗಿಸಲು ಅವರು ಸಹಾಯ ಮಾಡಿದರು. ಅಲ್ಲಿ ನಾವು ಮುಂದಿನ 2 ದಿನಗಳವರೆಗೆ ಅವರೊಂದಿಗೆ ವಾಸಿಸುವುದರಿಂದಾಗಿ ಅಡುಗೆಗೆ ಬೇಕಾದ ಸಾಮಗ್ರಿಗಳನ್ನು